ಕರ್ನಾಟಕ ಸರ್ಕಾರ
ತಾಂತ್ರಿಕ ಶಿಕ್ಷಣ ಇಲಾಖೆ

DTE-ADMI0EST(10)/71/2023/1596

ಆಯುಕ್ತರ ಕಛೇರಿ,
ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ
ಬೆಂಗಳೂರು-560001, ದಿನಾಂಕ: 13.03.2024

## ಸುತ್ತೋಲೆ

**ವಿಷಯ:** ತಾಂತ್ರಿಕ ಶಿಕ್ಷಣ ಇಲಾಖೆಯ ವ್ಯಾಪ್ತಿಯಲ್ಲಿನ ಸರ್ಕಾರಿ ಇಂಜಿನಿಯರಿಂಗ್ ಕಾಲೇಜು /ಪಾಲಿಟೆಕ್ನಿಕ್‌ಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಉಪನ್ಯಾಸಕರುಗಳಿಗೆ 7ನೇ ಎಐಸಿಟಿಇ ವೇತನ ಶ್ರೇಣಿಯಲ್ಲಿ ಪದೋನ್ನತಿ ನೀಡುವ ಬಗ್ಗೆ.

**ಉಲ್ಲೇಖ:**
1) ಸರ್ಕಾರದ ಪತ್ರ ಸಂಖ್ಯೆ:ಇಡಿ/86/ಡಿಟಿಇ/2023 ದಿನಾಂಕ:07.10.2023.
2) ಸರ್ಕಾರದ ಪತ್ರ ಸಂಖ್ಯೆ:ಇಡಿ/89/ಡಿಟಿಇ/2023 ದಿನಾಂಕ:01.12.2023.
3) ಪ್ರಧಾನ ಕಾರ್ಯದರ್ಶಿ, ಕರ್ನಾಟಕ ರಾಜ್ಯ ಸರ್ಕಾರಿ ಪಾಲಿಟೆಕ್ನಿಕ್ ಉಪನ್ಯಾಸಕರ ಸಂಘ(ರಿ) ಬೆಂಗಳೂರು ಇವರ ಪತ್ರ ಸಂ:KSGPL/2023-24/46, ದಿನಾಂಕ:11.03.2024.

******

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಸರ್ಕಾರಿ ಇಂಜಿನಿಯರಿಂಗ್ ಕಾಲೇಜು / ಪಾಲಿಟೆಕ್ನಿಕ್‌ಗಳಲ್ಲಿ ಪೂರ್ಣಕಾಲಿಕ ನೆಲೆಯಲ್ಲಿ ಸೇವೆಗೆ ಸೇರಿ ಕಾರ್ಯನಿರ್ವಹಿಸುತ್ತಿರುವ ಎಲ್ಲಾ ಬೋಧಕ ವರ್ಗದವರುಗಳಿಗೆ 7ನೇ ಎಐಸಿಟಿಇ ವೇತನ ಶ್ರೇಣಿ ಅಧಿನಿಯಮ 2019 ಮತ್ತು 2020 ಸ್ಪಷ್ಟೀಕರಣ/ ಸುತ್ತೋಲೆ ಹಾಗೂ ಎಐಸಿಟಿಇ ರವರು ಕಾಲಕಾಲಕ್ಕೆ ಹೊರಡಿಸಿರುವ ಆದೇಶಗಳನ್ವಯ, ಪದೋನ್ನತಿ ಪಡೆಯಲು ಅರ್ಹರಿರುವ ಎಲ್ಲಾ ಬೋಧಕ ವರ್ಗದವರುಗಳ ಪ್ರಸ್ತಾವನೆಗಳನ್ನು ಪ್ರಾಂಶುಪಾಲರು ಪಡೆದು ಎಐಸಿಟಿಇ 2019 ಮತ್ತು 2020 ಸ್ಪಷ್ಟೀಕರಣ ನಿಯಮಾನುಸಾರ ಪ್ರಾಥಮಿಕ ಹಂತದ ಪರಿಶೀಲನೆ ಮಾಡಿ ದಿನಾಂಕ: 25.04.2024 ರೊಳಗೆ ಸಿದ್ಧಪಡಿಸಿಕೊಳ್ಳುವಂತೆ ಸೂಚಿಸಲಾಗಿದೆ. ಬೋಧಕ ವರ್ಗದವರು ಸಲ್ಲಿಸಲಾದ ದಾಖಲೆಗಳ ನೈಜತೆಯ ಬಗ್ಗೆ ಹಾಗೂ ಮುಂದಿನ ಆಗುಹೋಗುಗಳಿಗೆ ಸಂಬಂಧಪಟ್ಟ ಪ್ರಾಂಶುಪಾಲರೇ ನೇರ ಹೊಣೆಗಾರರಾಗಿರುತ್ತಾರೆ ಎಂಬ ಅಂಶವನ್ನು ತಮ್ಮ ಅವಗಾಹನೆಗೆ ತರಲಾಗಿದೆ.

2019 ಮುಂಬಡ್ತಿ ಅಧಿನಿಯಮ ಮತ್ತು 2020 ಸ್ಪಷ್ಟೀಕರಣ/ಸುತ್ತೋಲೆಗಳನ್ವಯ ದಿನಾಂಕ: 01.03.2019 ರಿಂದ ಪ್ರಸ್ತುತ ದಿನದವರೆಗೂ ಅರ್ಹರಿರುವ ಎಲ್ಲಾ ಬೋಧಕ ವರ್ಗದವರುಗಳ ದಾಖಲೆಗಳೊಂದಿಗೆ ಪ್ರಸ್ತಾವನೆಗಳನ್ನು ಸೂಚಿಸುವ ದಿನಾಂಕದಂದು ಸಂಬಂಧಪಟ್ಟ ಸಂಸ್ಥೆಯ ಪ್ರಾಂಶುಪಾಲರು ಮತ್ತು ಆಯಾಯ ವಿಭಾಗದ ವಿಭಾಗಧಿಕಾರಿಗಳು ಆಯುಕ್ತಾಲಯಕ್ಕೆ ಹಾಜರಾಗಿ, ಪದೋನ್ನತಿಯ ಪ್ರಕ್ರಿಯೆ ಪೂರ್ಣಗೊಳ್ಳುವವರೆಗೆ ಕಾರ್ಯನಿರ್ವಹಿಸಲು ಈ ಮೂಲಕ ಸೂಚಿಸಲಾಗಿದೆ.

ನಿರ್ದೇಶಕರು
ತಾಂತ್ರಿಕ ಶಿಕ್ಷಣ ಇಲಾಖೆ

**ಇವರಿಗೆ:**
1. ಎಲ್ಲಾ ಸರ್ಕಾರಿ ಇಂಜಿನಿಯರಿಂಗ್ ಕಾಲೇಜು/ಪಾಲಿಟೆಕ್ನಿಕ್‌ಗಳ ಪ್ರಾಂಶುಪಾಲರುಗಳಿಗೆ ಮಾಹಿತಿಗಾಗಿ ಹಾಗೂ ಮುಂದಿನ ಕ್ರಮಕ್ಕಾಗಿ.
2. ಮಾನ್ಯ ಆಯುಕ್ತರ ಆಪ್ತ ಶಾಖೆಗೆ ಮಾಹಿತಿಗಾಗಿ.
3. ನಿರ್ದೇಶಕರ ಆಪ್ತ ಶಾಖೆಗೆ ಮಾಹಿತಿಗಾಗಿ.
4. ಜಂಟಿ ನಿರ್ದೇಶಕರು (ಆಡಳಿತ), (ಸಿಡಿಸಿ) ಆಪ್ತ ಶಾಖೆಗೆ ಮಾಹಿತಿಗಾಗಿ.
5. ಇ-ಆಡಳಿತ ವಿಭಾಗಕ್ಕೆ ಇಲಾಖೆಯ ಅಂತರ್ಜಾಲದಲ್ಲಿ ಪ್ರಕಟಿಸುವ ಸಲುವಾಗಿ.